# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)/ಪಿ.ಆರ್/174/2022-23 ದಿನಾಂಕ : 6-3-2023

ದಿನಾಂಕ: 04-03-2023 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ:174 (143) ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

<u>ಉಪಸ್ಥಿತರು:</u>

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ಸಿ.ಲಿಂಗರಾಜೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:143 ಹೊಸ ಸಂಖ್ಯೆ: 174 | 9480688143 |
| 3 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 4 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 5 | ವಿ.ವಿ.ಪುರಂ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | |
| 6 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 7 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |
| 8 | ಪಾರ್ವತಿಪುರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | |
| 9 | ಶ್ರೀ. ಹೇಮಂತಕುಮಾರ್ | ಸಹಾಯಕ ಅಭಿಯಂತರರು ವಿದ್ಯುತ್ ಬೆಂ.ವಿ.ಕಂ | 9449870535 |
| 10 | ಶ್ರೀ.ಟಿ. ಆಂಜನೇಯ | ಹಿರಿಯ ಆರೋಗ್ಯ ಪರಿವೀಕ್ಷಕರು | 9880052188 |
| 11 | ಕೆ.ಬಸವಯ್ಯ | ಎ.ಎಸ್.ಐ ವಿ.ವಿ.ಪುರಂ ಪಿ.ಎಸ್ | 9483712421 |

ದಿನಾಂಕ: 04-03-2023 ರಂದು ನಡೆದ ವಾರ್ಡ್ -174 ರ ಸಮಿತಿ ಸಭೆಯ ನಡಾವಳಿಗಳು:-

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರುಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಪು.ತಿ.ನೋ

ಮೊದಲು ಎಂ.ಎಂ.ವಿ.ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್ ಶ್ರೀ. ವೆಂಕಟೇಶ್ ರವರು ಮಾತನಾಡಿ ಈ ಕೆಳಗಿನ ವಿಷಯಗಳನ್ನು ಸಭೆಯ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು.

1. ಮಾರ್ಕೆಟ್ ರಸ್ತೆ (ಫುಡ್‌ಸ್ಟ್ರೀಟ್) ಯಲ್ಲಿ ನವೀಕರಣ ಕಾಮಗಾರಿಯು ನಡೆಯುತ್ತಿರುವುದರಿಂದ ಸದರಿ ರಸ್ತೆಯಲ್ಲಿನ ವ್ಯಾಪಾರಸ್ಥರು ಈಸ್ಟ್ ಸರ್ಕಲ್ ರಸ್ತೆ, ಹಾಗೂ ಅಕ್ಕಪಕ್ಕದ ರಸ್ತೆಗಳಲ್ಲಿ ರಾತ್ರಿ 12 ಘಂಟೆಯ ವರೆಗೂ ವ್ಯಾಪಾರ ನಡೆಸುತ್ತಿರುವುದರಿಂದ ಅಕ್ಕ ಪಕ್ಕದ ನಿವಾಸಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದು.
2. ಈಸ್ಟ್ ಸರ್ಕಲ್ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ವಾಹನ ಸವಾರರಿಗೆ ಹಾಗೂ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿರುವುದನ್ನು ತಪ್ಪಿಸುವುದು.
3. ವಾಸವಿ ದೇವಸ್ಥಾನದ ರಸ್ತೆಯ ಹಾಗೂ ಎಂ.ಎಂ.ವಿ.ರಸ್ತೆಗಳು ಸೇರುವ ಸ್ಥಳದಲ್ಲಿ "ವಡಾಪಾವ್" ಗಾಡಿಯನ್ನು ಹಾಕುತ್ತಿರುವುದನ್ನು ತೆರವುಗೊಳಿಸುವುದು ಹಾಗೂ ಸದರಿ ಸ್ಥಳದಲ್ಲಿ ಬೀದಿ ದೀಪದ ಸ್ವಿಚ್‌ಅನ್ನು ಸರಿಪಡಿಸುವುದು.
4. ಎಂ.ಎಂ.ವಿ. ರಸ್ತೆ ವಾಸವಿ ವಿದ್ಯಾನಿಕೇತನ್ ಬಳಿ ಡಾಂಬರೀಕರಣ ಮಾಡಲು ತೆಗದು ಹಾಕಿರುವ ಡೆಬ್ರೀಸನ್ನು ತೆರವುಗೊಳಿಸುವುದು. ಮತ್ತು ಸದರಿ ರಸ್ತೆಯ ಕರ್ಬ್ ಸ್ಟೋನ್‌ಗಳನ್ನು ಸರಿಪಡಿಸುವುದು.
5. ಸಜ್ಜನ್‌ರಾವ್ ವೃತ್ತದ ಬಳಿ ಬೀಡಾಡಿ ಹಸುಗಳ ಹಾವಳಿ ಹೆಚ್ಚಾಗಿದ್ದು ಹಾಗೂ ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ನಿರ್ವಹಿಸದಿರುವುದನ್ನು ಸರಿಪಡಿಸುವುದು.

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಚರ್ಚಿಸಲಾಗಿ ಸಭೆಯಲ್ಲಿ ಹಾಜರಿದ್ದ ವಿ.ವಿ.ಪುರಂ ಸಂಚಾರಿ ಪೊಲೀಸ್ ಠಾಣೆಯ ಎ.ಎಸ್.ಐ, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ವಾರ್ಡ್‌ನ ಅಭಿಯಂತರರಿಗೆ ತಮ್ಮ ಕಾರ್ಯವ್ಯಾಪ್ತಿಗೆ ಒಳಪಡುವ ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ನಂತರ ಸಭೆಯಲ್ಲಿ ಹಾಜರಿದ್ದ ರಾಮಯ್ಯಂಗಾರ್ ರಸ್ತೆಯ ಶ್ರೀ.ಎಂ.ಆರ್.ರಮೇಶ್ ರವರು ಮಾತನಾಡುತ್ತಾ ಡಯಾಗನಲ್ ರಸ್ತೆಯ ಎರಡೂ ಬದಿಯ ಪಾದಾಚಾರಿ ಮಾರ್ಗಗಳಲ್ಲಿ ದ್ವಿಚಕ್ರ ವಾಹನ ಮಾರಾಟಗಾರರು ವಾಹನಗಳನ್ನು ನಿಲ್ಲಿಸಿ, ಅತಿಕ್ರಮಿಸಿಕೊಂಡಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಹಾಗೂ ಮಿಡಲ್ ಸ್ಕೂಲ್ ರಸ್ತೆ ಮತ್ತು ರಾಮಯ್ಯಂಗಾರ್ ರಸ್ತೆಗಳು ಸೇರುವ ಕನ್ಸರ್‌ವೆನ್ಸಿಯಲ್ಲಿ ಬೀದಿ ದೀಪಗಳನ್ನು ಅಳವಡಿಸುವಂತೆ ಕೋರಿದರು. ಮಾನ್ಯ ನೋಡಲ್ ಅಧಿಕಾರಿಗಳು ಈ ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಚಾರಿ ವಿಭಾಗದ ಪೊಲೀಸರು ಹಾಗೂ ಬೀದಿ ದೀಪಗಳ ನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಸಭೆಗೆ ಬಂದಿದ್ದ ಶ್ರೀ.ಬಿ.ಎನ್.ಮಣಿ ರವರು ಮಾತನಾಡಿ ವಾರ್ಡ್‌ನ ರಸ್ತೆಗಳಿಗೆ ಡಾಂಬರೀಕರಣ ಮಾಡುವ ಕಾಮಗಾರಿಯು ಪ್ರಗತಿಯಲ್ಲಿದ್ದು ಡಾಂಬರೀಕರಣ ಮಾಡುವಾಗ ರಸ್ತೆಯ ಎರಡೂ ಬದಿ ಟ್ಯಾಪರ್ ಮಾಡಿಕೊಳ್ಳುವುದು ಹಾಗೂ ಕಾಮಗಾರಿ ಮುಗಿಸಿರುವ ಚರಂಡಿಗಳ ಭಾಗಗಳಲ್ಲಿ ನೀರು ಹರಿಯುವಂತೆ ಶೋಲ್ಡರ್ಸ್‌ಗಳನ್ನು ಮಾಡುವಂತೆ ಕೋರಿದರು. ಮಾನ್ಯ ನೋಡಲ್ ಅಧಿಕಾರಿಗಳು ಸದರಿ ವಿಷಯಗಳ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ಮು.ತಿ.ನೋ

ನಂತರ ಸಭೆಯಲ್ಲಿ ಹಾಜರಿದ್ದ ಪಾರ್ವತಿಪುರಂನ ಶ್ರೀ.ಮಧು ರವರು ಮಾತನಾಡಿ ಪಾರ್ವತಿಪುರಂನ 1ನೇ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸುವುದು, 2ನೇ ಮುಖ್ಯರಸ್ತೆಯಲ್ಲಿ ಡೆಬ್ರೀಸನ್ನು ತೆರವುಗೊಳಿಸುವುದು. ಸಮರ್ಪಕವಾಗಿ ಕುಡಿಯುವ ನೀರನ್ನು ಸರಬರಾಜು ಮಾಡುವುದು ಮತ್ತು ಸಜ್ಜನ್‌ರಾವ್ ವೃತ್ತದ ಒಳಗೆ ಇರುವ ಐ ಮಾಸ್ಟ್ ಲೈಟನ್ನು ಸರಿಪಡಿಸುವುದು, ಈ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಚರ್ಚಿಸಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮನ್ವಯಂತೆ ಸಾಧಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಶ್ರೀ.ವಿ.ಜಿ. ಪ್ರಸಾದ್ ರವರು ಮೊಬೈಲ್ ಫೋನ್ ಮುಖಾಂತರ ಮಾತನಾಡಿ ಈ ಕೆಳಕಂಡ ವಿಷಯಗಳನ್ನು ಸಭೆಯ ಗಮನಕ್ಕೆ ತಂದು ಸೂಕ್ತ ಕ್ರಮ ವಹಿಸುವಂತೆ ಕೋರಿದರು. 1.ಸರ್ವೇಯ ರಸ್ತೆಯಲ್ಲಿ ಕನ್ಸರ್‌ವೆನ್ಸಿಯಲ್ಲಿರುವ ನಾನ್ ವೆಜ್ ಹೋಟೆಲ್‌ನ್ನು ತೆರವುಗೊಳಿಸುವುದು,ಹಾರ್ಡ್‌ವೇರ್ ಶಾಪ್‌ನ ಒತ್ತುವರಿಯನ್ನು ತೆರವುಗೊಳಿಸುವುದು. 2). ಬಸವನಗುಡಿ ವ್ಯಾಪ್ತಿಯಲ್ಲಿ ಒತ್ತುವರಿ ಮಾಡಿಕೊಂಡಿರುವ ಕನ್ಸರ್‌ವೆನ್ಸಿಗಳನ್ನು ತೆರವುಗೊಳಿಸುವುದು. ಸದರಿ ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್‌ನ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

ನಂತರ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ಓ.ವಿ.ಜಯಕುಮಾರ್ ರವರು ಮಾತನಾಡಿ ಈ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ವಹಿಸುವಂತೆ ಕೋರಿದರು. ಬೀಡಾಡಿ ಹಸುಗಳ ಹಾವಳಿ ಮತ್ತು ಸಗಣಿಯನ್ನು ವಿಲೇವಾರಿ ಮಾಡುವುದು, ಪಾರಿವಾಳಗಳಿಗೆ ಆಹಾರ ಧಾನ್ಯಗಳನ್ನು ಹಾಕುತ್ತಿರುವುದನ್ನು ತಪ್ಪಿಸುವುದು. ಕುಡಿಯುವ ನೀರಿನ ಸೋರಿಕೆಯನ್ನು ತಡೆಯುವುದು, ಚರಂಡಿ ಕಾಮಗಾರಿಯನ್ನು ಸಮರ್ಪಕವಾಗಿ ಪೂರ್ಣಗೊಳಿಸುವುದು, ಮಾನ್ಯ ನೋಡಲಗ ಅಧಿಕಾರಿಗಳು ಈ ವಿಷಯವಾಗಿ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು, ಜಲ ಮಂಡಳಿ ಇಲಾಖೆ ಅಧಿಕಾರಿಗಳು ಹಾಗೂ ವಾರ್ಡ್‌ನ ಅಭಿಯಂತರರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ನಂತರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರವರ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -174 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 174 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)